ಓ.ಎಸ್ ನಂ.429/2013 ರಲ್ಲಿ
ಪಿ.ಡಬ್ಲ್ಯೂ-1(ವಿಜಯಕುಮಾರ)

ದಿನಾಂಕ 05.06.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ರಿಂದ 3ನೇ ಪ್ರತಿವಾದಿಗಳ ಪರ ವಕೀಲರಿಂದಃ-

ದಾವಾ ಸ್ವತ್ತು 1ನೇ ಪ್ರತಿವಾದಿಗೆ ಸೇರಿರುತ್ತದೆ. ನನ್ನ ವಾಸಸ್ಥಳ ತಮಿಳುನಾಡು. ನನಗೆ ತಮಿಳುನಾಡುವಿನಲ್ಲಿ ಜಮೀನುಗಳಿವೆ. ದಾವಾ ಸ್ವತ್ತು ಮಾರಾಟಕ್ಕಿದೆ ಎನ್ನುವ ವಿಚಾರವನ್ನು ನನಗೆ ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡು ತಿಳಿಸಿರುತ್ತಾರೆ. ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡು ನನಗೂ ಹಾಗೂ ಪ್ರತಿವಾದಿಗಳಿಗೂ ಪರಿಚಯಸ್ಥರಾಗಿದ್ದು, ಸದರಿಯವರೇ ಮಧ್ಯಸ್ಥಿಕೆ ಮಾಡಿರುತ್ತಾರೆ. ಕ್ರಯದ ಕರಾರು ಪತ್ರವಾದ ಒಂದು ತಿಂಗಳ ಮೊದಲು ಹೊಸೂರಿನಲ್ಲಿ 1ನೇ ಪ್ರತಿವಾದಿಯ ಮನೆಯಲ್ಲಿ ಕ್ರಯದ ಮಾತುಕತೆಯಾಗಿರುತ್ತದೆ. ದಾವಾ ಸ್ವತ್ತು 2 ಎಕರೆ 25 ಗುಂಟೆ ವಿಸ್ತೀರ್ಣವಿದ್ದು, ಪ್ರತಿ ಎಕರೆಗೆ 6,47,000/- ರೂಗಳಂತೆ ಒಟ್ಟು 17,00,000/- ರೂಗಳಿಗೆ ಮಾತುಕತೆಯಾಗಿತ್ತು. ಮಾತುಕತೆ ಸಂದರ್ಭದಲ್ಲಿ ಪ್ರತಿವಾದಿಗಳು 17,00,000/- ರೂಗಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ತಿಳಿಸಿದ್ದು, ಅದಕ್ಕೆ ನಾನು ಒಪ್ಪಿಗೆ ಸೂಚಿಸಿದೆನು. ಮಾತುಕತೆ ಸಂದರ್ಭದಲ್ಲಿ ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ, 1ನೇ ಪ್ರತಿವಾದಿಯ ಹೆಸರಿಗೆ ಆಕೆಯ ತಂದೆಯಿಂದ ಆದಂತಹ ದಾನಪತ್ರ ಹಾಗೂ ಮ್ಯುಟೇಶನ್ ದಾಖಲೆಗಳನ್ನು ನಾನು ನೋಡಿದ್ದೆನು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡು ರವರು ದಾಖಲೆಗಳು ಕ್ರಮಬದ್ಧವಾಗಿ ಇರುವುದಾಗಿ ತಿಳಿಸಿದ್ದರು. ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡು ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಕ್ರಯದ ಕರಾರು ಪತ್ರಕ್ಕೆ 1 ಹಾಗೂ

2 ನೇ ಪ್ರತಿವಾದಿಗಳು ಸಹಿಗಳನ್ನು ಮಾಡಿರುತ್ತಾರೆ. ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡು ರವರು ರಾಮನಗರದ ಶಿವಕುಮಾರ್ ಎಂಬ ಪತ್ರ ಬರಹಗಾರರ ಕಛೇರಿಯಲ್ಲಿ ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿಗಳನ್ನು ಮಾಡಿರುತ್ತಾರೆ. ಸದರಿಯವರು ಸಹಿ ಮಾಡಿದ ನಂತರ ಪತ್ರ ಬರಹಗಾರರು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ. ನಾನು ಹಾಗೂ ಸಾಕ್ಷಿದಾರರು ಸದರಿ ದಾಖಲೆಗೆ ಮಧ್ಯಾಹ್ನ 2.30 ರಿಂದ 3.00 ಗಂಟೆಯ ನಡುವೆ ಸಹಿ ಮಾಡಿದ್ದೆವು.

2. ಕ್ರಯದ ಕರಾರು ಪತ್ರವನ್ನು ಸಿದ್ಧಪಡಿಸಲು ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡು ರವರು ಮಾಹಿತಿಯನ್ನು ಕೊಟ್ಟಿರುತ್ತಾರೆ. ಕ್ರಯದ ಕರಾರು ಪತ್ರವಾದ ಒಂದು ತಿಂಗಳ ಮೊದಲಿನಲ್ಲಿ ಮಾತುಕತೆಯಾಗಿತ್ತು ಎಂದು ಹೇಳಿದ್ದು ಆ ಸಮಯದಲ್ಲಿ ಕ್ರಯದ ಬೆಲೆಯ ಬಗ್ಗೆ ಮಾತುಕತೆಯಾದದ್ದು ಹೊರತುಪಡಿಸಿ ಅದಕ್ಕೆ ಸಂಬಂಧಿಸಿದಂತೆ ಬೇರೆ ಯಾವುದೇ ಮಾತುಕತೆಯಾಗಿರುವುದಿಲ್ಲ. ಕ್ರಯದ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ಮಾತುಕತೆಯಾದ ನಂತರದಿಂದ ಕ್ರಯದ ಕರಾರು ಪತ್ರವಾದ ದಿನದ ನಡುವಿನ ಅವಧಿಯಲ್ಲಿ ನಿಮ್ಮ ಹಾಗೂ ಪ್ರತಿವಾದಿಗಳ ನಡುವೆ ಮಾತುಕತೆಯಾಗಿತ್ತೇ? ಎಂದರೆ ಸಾಕ್ಷಿಯು ಕ್ರಯದ ಕರಾರು ಪತ್ರ ನೋಂದಣಿಯಾದ ಎರಡು ದಿನಗಳ ಪೂರ್ವದಲ್ಲಿ ಪ್ರತಿವಾದಿಗಳು ಹಣ ಕೊಡುವಂತೆ ನನ್ನನ್ನು ಕೇಳಿದ್ದು ನಾನು ಕರಾರು ಪತ್ರ ನೋಂದಣಿಯಾಗುವ ಸಮಯದಲ್ಲಿ ಕೊಡುವುದಾಗಿ ತಿಳಿಸಿದ್ದೆನು ಎಂದು ನುಡಿಯುತ್ತಾರೆ. ಈ ವಿಚಾರ 1 ನೇ ಪ್ರತಿವಾದಿಯ ಮನೆಯ ಬಳಿ ನಡೆದಿತ್ತು. ಮಾತುಕತೆಯಾದ ಸಂದರ್ಭದಲ್ಲಿ ಟೋಕನ್ ಅಡ್ವಾನ್ಸ್ ಎಂದು ನಾನು ಯಾವುದೇ ಹಣವನ್ನು ಕೊಟ್ಟಿರಲಿಲ್ಲ. ಕ್ರಯದ

ಕರಾರು ಪತ್ರ ಸಿದ್ಧಗೊಂಡು ಎಲ್ಲರೂ ಅದೆಕ್ಕ ಸಹಿಗಳನ್ನು ಮಾಡಿದ ನಂತರದಲ್ಲಿ ನಾನು ಪ್ರತಿವಾದಿಗಳಿಗೆ ಮುಂಗಡ ಹಣವನ್ನು ಪಾವತಿಸಿದ್ದು ಆ ನಂತರ ಸಂಜೆ 5.00 ರಿಂದ 5.30 ರ ವೇಳೆಗೆ ಕರಾರು ಪತ್ರ ನೋಂದಣಿಯಾಯಿತು. ಶಿವಕುಮಾರ್ ರವರ ಕಛೇರಿಗೂ ಹಾಗೂ ಉಪನೋಂದಣಾಧಿಕಾರಿಗಳ ಕಛೇರಿಗೂ ಸುಮಾರು 150 ಅಡಿ ಅಂತರವಿರುತ್ತದೆ.

3. ರಾಮನಗರದಲ್ಲಿ ಕೋಳಮಾರನಕುಪ್ಪೆ ಎಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಶಿವಕುಮಾರ್ ರವರ ವಿಳಾಸ ಕೋಳಮಾರನಕುಪ್ಪೆ, ರಾಮನಗರಂ ತಾಲ್ಲೂಕು ಎಂದು ಕಾಣಿಸಲಾಗಿದೆ ಎಂದರೆ ಸಾಕ್ಷಿಯು ಅವರ ಕಛೇರಿ ರಾಮನಗರದ ಉಪನೋಂದಣಾಧಿಕಾರಿಗಳ ಕಛೇರಿಯ ಪಕ್ಕದಲ್ಲಿದೆ ಎಂದು ನುಡಿಯುತ್ತಾರೆ. ಸದರಿಯವರ ಕಛೇರಿ ನಾನು ಹೇಳಿದ ವಿಳಾಸದಲ್ಲಿದೆ ಎಂದು ಸಾಬೀತುಪಡಿಸುವ ಸಂಬಂಧ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಕೆ.ಪಿ.ಶಿವಕುಮಾರ್ ರವರ ಕಛೇರಿ ಕೋಳಮಾರನಕುಪ್ಪೆಯಲ್ಲಿದ್ದು ಅಲ್ಲಿಂದ ರಾಮನಗರದ ಉಪನೋಂದಣಾಧಿಕಾರಿಗಳ ಕಛೇರಿಗೆ ಸುಮಾರು 20 ಕಿ.ಮೀ ದೂರವಾಗುತ್ತದೆ ಎಂದರೆ ಸಾಕ್ಷಿಯು ಅವರು ಬ್ರಾಂಚ್ ಕಛೇರಿ ಇಟ್ಟಿರಬಹುದು ಅಥವಾ ಅವರ ಸಹಾಯಕರು ಇರಬಹುದು ಎಂದು ನುಡಿಯುತ್ತಾರೆ. ನಿಪಿ-1 ಕ್ಕೆ ಕೆ.ಪಿ.ಶಿವಕುಮಾರ್ ರವರು ಪತ್ರ ಬರಹಗಾರರೆಂದು ಸಹಿ ಮಾಡಿರುತ್ತಾರೆ. ನಿಪಿ-1 ದಾಖಲೆಗೆ ಕೆ.ಪಿ.ಶಿವಕುಮಾರ್ ರವರು ಸಹಿ ಮಾಡಿರುವುದನ್ನು ನಾನು ನೋಡಿದ್ದೇನೆ. ಸದರಿ ದಾಖಲೆಗೆ ಕೆ.ಪಿ.ಶಿವಕುಮಾರ್ ರವರು ಸಹಿ ಮಾಡಿದ

ಸಂದರ್ಭದಲ್ಲಿ ನಾನು, ಪ್ರತಿವಾದಿಗಳು ಹಾಗೂ ಸಾಕ್ಷಿದಾರರು ಹಾಜರಿದ್ದೆವು.

4. ನಿಪಿ-1 ದಾಖಲೆಗೆ 1 ಹಾಗೂ 2ನೇ ಪ್ರತಿವಾದಿಗಳು ಸಹಿ ಮಾಡಿದ್ದಾರೆ ಎನ್ನುವುದು ನಿಜ. ನಿಪಿ-1 ರಲ್ಲಿ ಅಲ್ಪವಯಿ 3ನೇ ಪ್ರತಿವಾದಿಯ ಪರ ಗಾರ್ಡಿಯನ್ ಆಗಿ ಯಾರೂ ಸಹಿ ಮಾಡಿಲ್ಲ? ಎಂದರೆ ಸಾಕ್ಷಿಯು 3ನೇ ಪ್ರತಿವಾದಿಯ ಹೆಸರು ನಮೂದಾಗಿದೆ ಎಂದು ನುಡಿಯುತ್ತಾರೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಿಪಿ-1 ರಲ್ಲಿ 6 ತಿಂಗಳೊಳಗಾಗಿ ಕ್ರಯಪತ್ರವನ್ನು ನೋಂದಣಿ ಮಾಡಿಕೊಡಬೇಕೆಂದು ಒಪ್ಪಂದವಾಗಿತ್ತು. ಕ್ರಯದ ಕರಾರು ಪತ್ರವಾದ ದಿನ ದಾವಾ ಸ್ವತ್ತಿನ ದಾಖಲಾತಿಗಳು 1ನೇ ಪ್ರತಿವಾದಿಯ ಹೆಸರಿನಲ್ಲಿಯೇ ಇದ್ದವು? ಎಂದರೆ ಸಾಕ್ಷಿಯು ಸರ್ವೇ ಸ್ಕೆಚ್ ಇರಲಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.67 ರ ಪೂರ್ಣ ವಿಸ್ತೀರ್ಣ 2 ಎಕರೆ 25 ಗುಂಟೆ ಹೌದೇ ಅಥವಾ ಅಲ್ಲವೇ? ಎಂದರೆ ಸಾಕ್ಷಿಯು 2 ಎಕರೆ 25 ಗುಂಟೆ ಎಂದು ನುಡಿಯುತ್ತಾರೆ. ಪೂರ್ಣ ವಿಸ್ತೀರ್ಣಕ್ಕೆ ಪಹಣಿ ಇದ್ದ ಪಕ್ಷದಲ್ಲಿ ಸರ್ವೇ ಸ್ಕೆಚ್‌ನ ಅವಶ್ಯಕತೆ ಇರುವುದಿಲ್ಲ? ಎಂದರೆ ಸಾಕ್ಷಿಯು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಕೇಳಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡು ರವರು ಕೇಳಿದ್ದರು. ಕ್ರಯಪತ್ರವನ್ನು ನೋಂದಣಿ ಮಾಡಲು ಯಾವುದೇ ನಿರ್ಬಂಧಗಳು ಇರಲಿಲ್ಲ ಎನ್ನುವುದು ಹಾಗೂ ಈ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

5. ನನ್ನ ಬಳಿ ಹಣವಿದ್ದು ಪ್ರತಿವಾದಿಗಳಿಂದ ಕ್ರಯಪತ್ರವನ್ನು

ನೋಂದಣಿ ಮಾಡಿಸಿಕೊಡುವಂತೆ ನಾನು ಪ್ರತಿವಾದಿಗಳನ್ನು ಮೌಖಿಕವಾಗಿ ಕೇಳುತ್ತಿದ್ದು, ಲಿಖಿತ ನೋಟಿಸ್ ಕೊಟ್ಟಿರುವುದಿಲ್ಲ. ಕ್ರಯದ ಕರಾರು ಪತ್ರವಾದ ನಂತರದಲ್ಲಿ ನಿಪಿ-3 ರಂತೆ ಪ್ರತಿವಾದಿಗಳಿಗೆ ನೋಟಿಸನ್ನು ಕೊಡಿಸುವ ಪೂರ್ವದಲ್ಲಿ ಪ್ರತಿವಾದಿಗಳ ವಿರುದ್ಧ ಏನಾದರೂ ಕ್ರಮ ಕೈಗೊಂಡಿದ್ದೀರಾ? ಎಂದರೆ ಸಾಕ್ಷಿಯು ನಾನು ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡುರವರನ್ನು ಕರೆದುಕೊಂಡು ಪ್ರತಿವಾದಿಗಳ ಬಳಿ ಹೋಗಿ ಮಾತನಾಡುತ್ತಿದ್ದೆ ಎಂದು ನುಡಿಯುತ್ತಾರೆ.

6. ನಿಪಿ-3 ರಂತೆ ಪ್ರತಿವಾದಿಗಳಿಗೆ ನೋಟಿಸನ್ನು ಕೊಡಿಸಲು ನಮ್ಮ ವಕೀಲರಿಗೆ ನಾನು, ಮಹೇಶ್ ಕುಮಾರ್ ಹಾಗೂ ಮುಖೇಶ್ ನಾಯ್ಡುರವರು ಮಾಹಿತಿಯನ್ನು ಕೊಟ್ಟಿರುತ್ತೇವೆ. ಸದರಿ ನೋಟಿಸನ್ನು ಕೊಡಿಸಲು ನಮ್ಮ ವಕೀಲರಿಗೆ ನನ್ನ ಬಳಿ ಇದ್ದಂತಹ ದಾನಪತ್ರ ಹಾಗೂ ಕ್ರಯದ ಕರಾರು ಪತ್ರವನ್ನು ಕೊಟ್ಟಿದ್ದೆನು. ಸದರಿ ದಾನಪತ್ರ ಕ್ರಯದ ಕರಾರು ಪತ್ರವಾದ ದಿನ ನನ್ನ ಸುಪರ್ದಿಗೆ ಬಂದಿರುತ್ತದೆ. ಸದರಿ ದಾನಪತ್ರದ ಬಗ್ಗೆ ಕ್ರಯದ ಕರಾರು ಪತ್ರದಲ್ಲಿ ಬರೆಸಲಾಗಿದೆ. ಸದರಿ ದಾನಪತ್ರ ನನ್ನ ಬಳಿಯಿದ್ದ ಕಾರಣ ಅದರ ಬಗ್ಗೆ ನಿಪಿ-3 ರಲ್ಲಿ ಉಲ್ಲೇಖಿಸಲಾಗಿರುತ್ತದೆ. 3 ನೇ ಪ್ರತಿವಾದಿಯ ಹೆಸರಿಗೆ ನಿಪಿ-3 ರ ಪ್ರತಿಯನ್ನು ಕಳುಹಿಸಿಲ್ಲ ಎನ್ನುವುದು ನಿಜ.

7. ಪ್ರತಿವಾದಿಗಳು ನಿಪಿ-3 ನೋಟಿಸ್‌ಗೆ ನಿಪಿ-8 ರಂತೆ ಜವಾಬು ನೋಟಿಸನ್ನು ಕಳುಹಿಸಿದ್ದು ಅದರಲ್ಲಿ ಏನು ಬರೆಸಿದ್ದಾರೆಂದು ತಿಳಿದುಕೊಂಡಿದ್ದೀರಾ? ಎಂದರೆ ಸಾಕ್ಷಿಯು ಅದರಲ್ಲಿ ಬರೆಸಿರುವ ವಿಚಾರ ಸುಳ್ಳು ಎಂದು ನುಡಿಯುತ್ತಾರೆ. ಅದರಲ್ಲಿ ಬರೆಸಿರುವ ಸಂಪೂರ್ಣ

ವಿಚಾರಗಳು ಸುಳ್ಳೇ? ಎಂದರೆ ಸಾಕ್ಷಿಯು ನನ್ನ ಕ್ರಯದ ಕರಾರು ಪತ್ರ ಸತ್ಯವಾಗಿದ್ದು ಉಳಿದ ವಿಚಾರಗಳು ಸುಳ್ಳು ಎಂದು ನುಡಿಯುತ್ತಾರೆ.

8. ಈಗ ನನಗೆ ತೋರಿಸಲಾದ ದಾಖಲೆಯಲ್ಲಿನ ಸಹಿ ಹಾಗೂ ಹೆಬ್ಬೆಟ್ಟಿನ ಗುರುತು ನನ್ನದಲ್ಲ. ಸಾಕ್ಷಿಗೆ ಪ್ರತಿವಾದಿಗಳ ಪರ ವಕೀಲರು ತೋರಿಸಲಾದ ದಾಖಲೆಯ ದಿನಾಂಕ 11.06.2012 ರ ತಾರೀಖನ್ನು ಹೊಂದಿರುವ ರೆಸಿಪ್ಟ್ ಎಂಬ ದಾಖಲೆಯಾಗಿದ್ದು ಸದರಿ ದಾಖಲೆಯನ್ನು ಕೇವಲ ಗುರುತಿಸುವಿಕೆಯ ಸಲುವಾಗಿ **ನಿಎನ್-1** ಎಂದು ಗುರುತಿಸಲಾಯಿತು. ನಿಪಿ-8 ಜವಾಬು ನೋಟಿಸ್‌ನಲ್ಲಿ ಪ್ರತಿವಾದಿಗಳು ನಿಎನ್-1 ರಶೀದಿಯ ಬಗ್ಗೆ ಬರೆಸಿದ್ದಾರೆ? ಎಂದರೆ ಸಾಕ್ಷಿಯು ಸದರಿ ದಾಖಲೆ ಸುಳ್ಳು ಎಂದು ನುಡಿಯುತ್ತಾರೆ. ನಿಪಿ-8 ಜವಾಬು ನೋಟಿಸ್‌ನಲ್ಲಿ ನಿಎನ್-1 ರಶೀದಿಯ ಬಗ್ಗೆ ಬರೆಸಲಾಗಿದೆ ಎನ್ನುವುದು ನಿಜ. ನಾನು ನಿಪಿ-8 ಜವಾಬು ನೋಟಿಸನ್ನು ನಮ್ಮ ವಕೀಲರ ಬಳಿ ನೋಡಿರುತ್ತೇನೆ. ನಿಪಿ-8 ರಲ್ಲಿ ನಿಎನ್-1 ರ ಕುರಿತಂತೆ ಬರೆಸಲಾದ ವಿಚಾರಕ್ಕೆ ಸಂಬಂಧಿಸಿದಂತೆ ಸದರಿ ದಾಖಲೆಯ ಪ್ರತಿಯನ್ನು ನನಗೆ ಒದಗಿಸುವಂತೆ ನಾನು ಪ್ರತಿವಾದಿಗಳಿಗೆ ಯಾವುದೇ ನೋಟಿಸ್ ಕೊಟ್ಟಿಲ್ಲ. ನಿಪಿ-8 ರ 6 ನೇ ಖಂಡಿಕೆಯಲ್ಲಿ ಪ್ರತಿವಾದಿಗಳು ಸದರಿ ಜವಾಬು ನೋಟಿಸನ್ನು ನೀಡಿದ ದಿನದಿಂದ 15 ದಿನಗಳೊಳಗಾಗಿ ನಾನು ಅವರ ಹೆಸರಿಗೆ ಕ್ರಯದ ಕರಾರು ಪತ್ರದ ರದ್ದಿಯಾತಿ ಪತ್ರವನ್ನು ನೋಂದಣಿ ಮಾಡಿಕೊಡಬೇಕೆಂದು ಬರೆಸಿದ್ದಾರೆ ಎನ್ನುವುದು ನಿಜ. ಈ ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ನಿಪಿ-8 ದಾಖಲೆಯನ್ನು ನಿಮ್ಮ ವಕೀಲರಿಗೆ ಕೊಟ್ಟಿದ್ದಿರೆ? ಎಂದರೆ ಸಾಕ್ಷಿಯು ಅದು ನಮ್ಮ ವಕೀಲರ ವಿಳಾಸಕ್ಕೆ ಬಂದದ್ದು ಎಂದು ನುಡಿಯುತ್ತಾರೆ.

9. ಈ ದಾವೆಯಲ್ಲಿ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ಬರೆಸಿರುವ ವಿಚಾರಗಳನ್ನು ತಿಳಿದುಕೊಂಡು ನೀವು ಸಾಕ್ಷಿ ನುಡಿಯುತ್ತಿದ್ದೀರಾ? ಎಂದರೆ ಸಾಕ್ಷಿಯು ಅವರು ಬರೆಸಿರುವ ವಿಚಾರ ಸುಳ್ಳು ಎಂದು ನುಡಿಯುತ್ತಾರೆ. ಪುನಃ ಸಾಕ್ಷಿಗೆ ನ್ಯಾಯಾಲಯದಿಂದ ಇದೇ ಪ್ರಶ್ನೆಯನ್ನು ಕೇಳಲಾಗಿ ಸಾಕ್ಷಿಯು ಪ್ರತಿವಾದಿಗಳು ಲಿಖಿತ ಹೇಳಿಕೆಯಲ್ಲಿ ಬರೆಸಿರುವ ವಿಚಾರ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಎನ್-1 ನ್ನು ನಾನೇ ಪ್ರತಿವಾದಿಗಳಿಗೆ ಬರೆದುಕೊಟ್ಟಿರುವ ಕಾರಣ ಸದರಿ ದಾಖಲೆಯ ಬಗ್ಗೆ ವಾದಪತ್ರದಲ್ಲಾಗಲೀ ಅಥವಾ ನನ್ನ ಪ್ರಮಾಣಪತ್ರದಲ್ಲಾಗಲೀ ನಾನು ಬರೆಸಿಲ್ಲ ಎನ್ನುವುದು ಸರಿಯಲ್ಲ.

10. ನಿಎನ್-1 ರಲ್ಲಿ ನಿಮ್ಮ ಸಹಿ ಎಂದು ಹೇಳಲಾದ ಸಹಿಯನ್ನು ಹಾಗೂ ನ್ಯಾಯಾಲಯದ ಕಡತದಲ್ಲಿರುವ ದಾಖಲೆಗಳಲ್ಲಿನ ನಿಮ್ಮ ಸಹಿಗಳನ್ನು ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಲು ನಿಮ್ಮ ಅಭ್ಯಂತರವಿಲ್ಲ? ಎಂದರೆ ಸಾಕ್ಷಿಯು ಸದರಿ ದಾಖಲೆ ನಕಲು (ಡೂಪ್ಲಿಕೇಟ್) ಎಂದು ನುಡಿಯುತ್ತಾರೆ. ಸದರಿ ದಾಖಲೆ ನಕಲು (ಡೂಪ್ಲಿಕೇಟ್) ಎಂದರೆ ಏನು? ಎಂದರೆ ಸಾಕ್ಷಿಯು ಅದನ್ನು ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಎನ್-1 ದಾಖಲೆಯಲ್ಲಿರುವ ಸಹಿಯನ್ನು ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಲು ನನ್ನ ಅಭ್ಯಂತರವಿಲ್ಲ.

11. ಕ್ರಯದ ಕರಾರು ಪತ್ರವಾದ ನಂತರದ 6 ತಿಂಗಳಲ್ಲಿ ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಳ್ಳಲು ನ್ನ ಬಳಿ ಉಳಿದ ಕ್ರಯದ ಹಣವಿರಲಿಲ್ಲ ಎನ್ನುವುದು ಸರಿಯಲ್ಲ. ನನ್ನ ಬಳಿ ಹಣವಿರಲಿಲ್ಲದ ಕಾರಣ ನಾನು ಪ್ರತಿವಾದಿಗಳಿಂದ ಕ್ರಯದ ಕರಾರು ಪತ್ರವನ್ನು ರದ್ದುಪಡಿಸಿ ನಾನು

ಪಾವತಿಸಿದ್ದ ಮುಂಗಡ ಹಣವನ್ನು ಬಡ್ಡಿ ಸಮೇತ ವಾಪಸ್ ಕೊಡುವಂತೆ ಪ್ರತಿವಾದಿಗಳಿಗೆ ಕೇಳಿದ್ದೆ ಎನ್ನುವುದು ಸರಿಯಲ್ಲ. ಅದರಂತೆ ದಿನಾಂಕ 10.10.2012 ರಂದು ಪ್ರತಿವಾದಿಗಳು ನನಗೆ 10 ಲಕ್ಷ ರೂಗಳನ್ನು ನಗದಾಗಿ ಪಾವತಿಸಿದ್ದಾರೆ ಎನ್ನುವುದು ಸರಿಯಲ್ಲ. ದಿನಾಂಕ 11.06.2012 ರಂದು ಉಳಿದ 6 ಲಕ್ಷ ರೂಗಳೊಂದಿಗೆ 2,40,000/- ರೂಗಳನ್ನು ನಾನು ಪ್ರತಿವಾದಿಗಳಿಗೆ ಪಾವತಿಸಿದ್ದ ಒಟ್ಟು ಮುಂಗಡ ಹಣಕ್ಕೆ ಬಡ್ಡಿ ಎಂದು ಸೇರಿಸಿ ನನಗೆ 8,40,000/- ರೂಗಳನ್ನು ನಗದಾಗಿ ಪಾವತಿಸಿದ್ದಾರೆ ಎನ್ನುವುದು ಸರಿಯಲ್ಲ. ಆ ದಿನ ನಾನು ಪ್ರತಿವಾದಿಗಳಿಂದ 8,40,000/- ರೂಗಳನ್ನು ಅಂತಿಮ ಹಾಗೂ ಪೂರ್ಣ ಇತ್ಯರ್ಥದ ಹಣವೆಂದು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-1 ಕ್ರಯದ ಕರಾರು ಪತ್ರದಲ್ಲಿ ಕಾಣಿಸಲಾದ 16 ಲಕ್ಷ ಮುಂಗಡ ಹಣವನ್ನು ಹಾಗೂ ಅದಕ್ಕೆ 2,40,000/- ರೂಗಳ ಬಡ್ಡಿ ಹಣವನ್ನು ಪ್ರತಿವಾದಿಗಳಿಂದ ಪಡೆದುಕೊಂಡು ನಿಎನ್-1 ದಾಖಲೆಗೆ ನಾನೇ ಸಹಿ ಮಾಡಿ ಕೊಟ್ಟಿರುವುದು ಎನ್ನುವುದು ಸರಿಯಲ್ಲ. ನಿಎನ್-1 ದಾಖಲೆಯಲ್ಲಿ ನಿಪಿ-1 ಕ್ರಯದ ಕರಾರು ಪತ್ರವನ್ನು ನಾನು ರದ್ದುಪಡಿಸಿಕೊಡುವುದಾಗಿ ಒಪ್ಪಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-1 ರಲ್ಲಿ ಕಾಣಿಸಲಾದ ಮುಂಗಡ ಹಣವನ್ನು ಸಂಪೂರ್ಣವಾಗಿ ಬಡ್ಡಿ ಸಮೇತ ನೀವು ಪ್ರತಿವಾದಿಗಳಿಂದ ವಾಪಸ್ ಪಡೆದುಕೊಂಡಿರುವ ಕಾರಣ ನಿಪಿ-1 ರ ಆಧಾರದ ಮೇಲೆ ನಿಮಗೆ ಯಾವುದೇ ಹಕ್ಕಿಲ್ಲ? ಎಂದರೆ ಸಾಕ್ಷಿಯು ನನಗೆ ಜಮೀನು ಬೇಕು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಕಾಣಿಸಲಾದ ಮುಂಗಡ ಹಣವನ್ನು ನಾನು ಪ್ರತಿವಾದಿಗಳಿಂದ ಸಂಪೂರ್ಣವಾಗಿ ವಾಪಸ್ ಪಡೆದುಕೊಂಡ ಕಾರಣ ನಿಪಿ-1 ಕ್ಕೆ ನಾನು ರದ್ದಿಯಾತಿ ಪತ್ರವನ್ನು ಬರೆದುಕೊಡಬೇಕು ಎನ್ನುವುದು ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿಯ ದಾನಪತ್ರವನ್ನು

ಅವರಿಗೆ ವಾಪಸ್ ಕೊಡಬೇಕು ಎನ್ನುವುದು ಸರಿಯಲ್ಲ. ನಿಎನ್-1 ರಂತೆ ನಾನೇ ಪ್ರತಿವಾದಿಗಳಿಗೆ ರಶೀದಿ ಬರೆದುಕೊಟ್ಟಿದ್ದರೂ ಸಹ ಅವರಿಗೆ ಮೋಸ ಮಾಡಬೇಕೆಂಬ ಉದ್ದೇಶಕ್ಕಾಗಿ ಸದರಿ ದಾಖಲೆಯಲ್ಲಿನ ಸಹಿ ನನ್ನದಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.